ಹೆಂಚಿನ ಮನೆಯುಳ್ಳವರಿಗೆ ಬಿ.ಪಿ.ಎಲ್. ಕಾರ್ಡ್ ಹಂಚಿಕೆ.

1217 (1250) ಶ್ರೀ ಹನುಮೇಗೌಡ ಕೆ.ಹೆಚ್. (ಹಾಸನ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೆಂಚಿನ ಮನೆಯನ್ನು ಹೊಂದಿರುವ ಕುಟುಂಬಗಳಿಗೆ (ಬಿ.ಪಿ.ಎಲ್) ಬಡತನ ರೇಖೆಗಿಂತ ಕೆಳಗಿನ ಸೌಲಭ್ಯವುಳ್ಳ ಕಾರ್ಡ್ ಪದ್ಧತಿಯ ವಿತರಣೆಯನ್ನು ಹೂಡಬಾರದೆಂದು ಸರ್ಕಾರವು ನಿಯಮಾವಳಿ ರೂಪಿಸಿದೆಯೇ?

ಆ) ರೂಪಿಸಿದ್ದಲ್ಲಿ ಈ ನಿಯಮ ಯಾವಾಗಿನಿಂದ ಜಾರಿಗೆ ತರಲು ಉದ್ದೇಶಿಸಲಾಗಿದೆ?

ಇ) ಸದರಿ ನಿಯಮದ (ಬಿ.ಪಿ.ಎಲ್) ಅನ್ವಯ ಬಡವರು ವಂಚಿತರಾಗಬೇಕೆಂದು ಸರ್ಕಾರದ ಉದ್ದೇಶವೇ;

ಈ) ಈ ನಿರ್ಬಂಧವನ್ನು ಸಡಿಲಿಸುವ ಬಗ್ಗೆ ಸರ್ಕಾರ ಆಲೋಚಿಸುತ್ತಿದೆಯೇ?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು)

ಅ) ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ನೀಡಲಾಗುವ ಪಡಿತರ ಚೀಟಿಯನ್ನು ಪಕ್ಕಾ ಮನೆಯನ್ನು ಹೊಂದಿರುವ ಕುಟುಂಬಳಿಗೆ ನೀಡಬಾರದೆಂದು ತೀರ್ಮಾನಿಸಲಾಗಿದೆ.

ಸರ್ಕಾರದ ವಿವಿಧ ಯೋಜನೆಗಳಡಿ ಬಡವರಿಗಾಗಿ ನಿರ್ಮಿಸಿಕೊಟ್ಟಿರುವ ಮನೆಗಳನ್ನು ಪಕ್ಕಾ ಮನೆಗಳೆಂದು ಪರಿಗಣಿಸದಿರಲು ತಿಳಿಸಲಾಗಿದೆ.

ಆ) ಆರ್ಥಿಕ ಸಮೀಕ್ಷೆ ಆಧಾರದ ಹಳದಿ ಪಡಿತರ ಚೀಟಿ ವಿತರಣೆಯೊಂದಿಗೆ ಮೇಲಿನ ನಿಯಮ ಜಾರಿ ಗೊಳ್ಳುತ್ತದೆ. ಏಪ್ರಿಲ್-2001ರ ಮಾಹೆಯಿಂದ ಇದು ಜಾರಿಗೊಳ್ಳುವ ನಿರೀಕ್ಷೆ ಇದೆ.

ಇ) ಅರ್ಹ ಬಡವರು ಸೌಲಭ್ಯದಿಂದ ವಂಚಿತರಾಗದಿರಲು ಸರ್ಕಾರ ಎಲ್ಲಾ ಎಚ್ಚರಿಕೆಯನ್ನು ತೆಗೆದುಕೊಂಡಿದೆ.

ಈ) ಮೇಲೆ ತಿಳಿಸಿರುವಂತೆ ಸರ್ಕಾರದ ಯೋಜನೆಗಳಲ್ಲಿ ನಿರ್ಮಿಸಿರುವ ಮನೆಗಳಿಗೆ ವಿನಾಯಿತಿ ನೀಡಲಾಗಿದೆ. ಅಲ್ಲದೆ ಬಡತನ ರೇಖೆಯ ಪರಗಣನೆಗೆ ಪಕ್ಕಾ ಮನೆಯಷ್ಟೇ ಅಲ್ಲದೇ ಇತರ ಆರ್ಥಿಕ ಮಾನದಂಡಗಳನ್ನೂ ಸಹ ಅಳವಡಿಸಿಕೊಳ್ಳಲಾಗಿದೆ.

ಕೆಲವು ಉತ್ಪಾದನಾ ಸಂಸ್ಥೆಗಳಿಗೆ ಮಾರಾಟ ತೆರಿಗೆಯಿಂದ ವಿನಾಯಿತಿ ನೀಡಿರುವುದು

1218 (1446) ಶ್ರೀ ಜಗದೀಶ್ ಶೆಟ್ಟರ್ ಹುಬ್ಬಳ್ಳಿ ಗ್ರಾಮೀಣ : ಮಾನ್ಯ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 1957 ಸಬ್ ಸೆಕ್ಷನ್ (3), ಸೆಕ್ಷನ್ 19-ಸಿ ತೆರಿಗೆ (ಟ್ಯಾಕ್ಸ್ ಆನ್ ಎಂಟ್ರಿ ಗೂಡ್ಸ್) ಅಧಿನಿಯಮ 1979 ಸೆಕ್ಷನ್ 11-ಎ ಇವುಗಳ ಅನ್ವಯ ಎಷ್ಟು ಸಂಸ್ಥೆಗಳಿಗೆ ಇಲ್ಲಿಯವರೆಗೂ ಮಾರಾಟ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ; ವಿವರ ನೀಡುವುದು;

ಆ) ಈ ರೀತಿ ಮಾರಾಟ ತೆರಿಗೆ ವಿನಾಯಿತಿ ನೀಡಿರುವುದರಿಂದ ಪ್ರತಿ ತಿಂಗಲು ಸರ್ಕಾರದ ಬೊಕ್ಕಸಕೆ ಉಂಟಾಗುತ್ತಿರುವ ಆರ್ಥಿಕ ನಷ್ಟ ಎಷ್ಟು;

ಇ) ಈ ನೀರಾವರಿ ತೆರಿಗೆ ವಿನಾಯಿತಿಯನ್ನು ಎಷ್ಟು ವರ್ಷಗಳವರೆಗೆ ವಿಸ್ತರಿಸಲಾಗುವುದು?

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಮಂತ್ರಿಗಳು)

ಅ) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 1957 ರ ಸೆಕ್ಷನ್ 19-ಸಿ ಪ್ರಕಾರ ಈ ವರೆಗೆ 33 ಸಂಸ್ಥೆಗಳಿಗೆ ಮಾರಾಟ ತೆರಿಗೆ ವಿನಾಯಿತಿ ಹಾಗೂ ಮುಂದೂಡುವಿಕೆ ನೀಡಲಾಗಿದೆ. ಈ 33 ಸಂಸ್ಥೆಗಳ ಪೈಕಿ 17 ಸಂಸ್ಥೆಗಳಿಗೆ ಪ್ರವೇಶ ತೆರಿಗೆ ವಿನಾಯಿತಿಯು ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ 1979ರ ಸೆಕ್ಷನ್ 11-ಎ ಪ್ರಕಾರ ನೀಡಲಾಗಿದೆ.

ಆ) ಈ ವಿನಾಯಿತಿ ಃ ಮುಂದೂಡುವಿಕೆಯಿಂದ ಮಾಸಿಕವಾಗಿ ಈ ಸಂಸ್ಥೆಗಳಿಗೆ 154 ಕೋಟಿ ರೂ.ಗಳಷ್ಟು ತೆರಿಗೆ ವಿನಾಯಿತಿ : ಸೌಲಭ್ಯ ಪೈಕಿ 9 ಘಟಕಗಳು ಇನ್ನೂ ಸ್ಥಾಪನೆ ಹಂತದಲ್ಲಿ ಇದ್ದು ಉತ್ಪಾದನೆ ಮತ್ತು ಮಾರಾಟ ಮಾಡಿರುವುದಿಲ್ಲ. 3ಘಟಕಗಳು ಉತ್ಪಾದಿಸುವ ಸರಕಿನ ಮೇಲೆ ಮಾರಾಟ ತೆರಿಗೆ ಅಕರವಾಗಿರುವುದಿಲ್ಲ. ಮೇಲ್ಕಂಡ 33 ಘಟಕಗಳ ಪೈಕಿ 17 ಘಟಕಗಳು ಮಾರಾಟ ತೆರಿಗೆ ವಿನಾಯಿತಿಃ ಮುಂದೂಡುವಿಕೆಯನ್ನು 2000-01 ನೇ ಸಾಲಿನಲ್ಲಿ ಮಾಸಿಕ 46.90 ಕೋಟಿ ಉಪಯೋಗಿಸಿಕೊಂಡಿರುತ್ತವೆ.

ಆ) ವಿನಾಯಿತಿ ಸೌಲಭ್ಯವು 5 ವರ್ಷದಿಂದ 18 ವರ್ಷಗಳವರೆಗೆ ಕೊಡಲ್ಪಟ್ಟಿರುತ್ತದೆ.

ಇ) ಷಮುಂದೂಡುವಿಕೆ ಸೌಲಭ್ಯವು 8 ವರ್ಷದಿಂದ 14 ವರ್ಷಗಳವರೆಗೆ ಕೊಡಲ್ಪಟ್ಟಿರುತ್ತದೆ.

ರಾಜ್ಯದಲ್ಲಿ ಗ್ರಾಮೀಣ ಅಭ್ಯರ್ಥಿಗಳಿಗೆ ಮೀಸಲಾತಿ

12 19 (1447) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈಗ ತಂದಿರುವ ಗ್ರಾಮೀಣ ಅಭ್ಯರ್ಥಿಗಳ ಮೀಸಲಾತಿ ಪದ್ಧತಿ ಎಂದಿನಿಂದ ಜಾರಿಗೆ ಬಂದಿರುತ್ತದೆ;

ಆ) ಈ ಮೀಸಲಾತಿ ಪಡೆಯುವ ಬಗ್ಗೆ ನಿರ್ಧಾರಗೊಂಡಿರುವ ಅಂಶಗಳ ವಿವರಗಳನ್ನು ನೀಡುವುದು;

ಇ) ಈ ಹಿಂದೆ ಅರ್ಜಿಗಳನ್ನು ಕರೆದಿರುವ ಇಲಾಖೆಗಳಿಗೂ ಈ ಮೀಸಲಾತಿ ಅನ್ವಯವಾಗುತ್ತದೆಯೇ;

ಈ) ಹಾಗಿದ್ದರೆ ಅಂತಹ ನೇಮಕಾತಿಗಳಿಗೆ ಯಾವ ಆಧಾರದ ಮೇಲೆ ಗ್ರಾಮೀಣ ಮೀಸಲಾತಿ ಅನುಸರಿಸಲಾಗುವುದು ವಿವರ ನೀಡುವುದು?